■ ವಿಶಾಖ ಎನ್.



# ದೊಡ್ಡ ಗಳಿಕೆಯತ್ತ ಸೈಯಾರಾ

'ಸೈಯಾರಾ' ಹಿಂದಿ ಸಿನಿಮಾ ಭಾರಿ ಸದ್ದು ಮಾಡುತ್ತಿದೆ. ಅದಕ್ಕೆ ಒಂದು ಕಾರಣ, ಚಿತ್ರದ ಬಾಕ್ಸ್‌ಆಫೀಸ್ ಗಳಿಕೆ. ಇನ್ನೊಂದು, ಚಿತ್ರ ನೋಡಿದ ನಂತರ ಜನರು ಭಾವುಕರಾಗಿ ಅಳುವ ವಿಡಿಯೊಗಳು ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿರುವುದು.

ಏಳೆಂಟು ವರ್ಷಗಳ ಹಿಂದೆ ಸಹಾಯಕ ನಿರ್ದೇಶಕರಾಗಿದ್ದ ಅಹಾನ್ ಪಾಂಡೆ ನಾಯಕನಾಗಿ ಪ್ರವೇಶ ಪಡೆದಿರುವ ಸಿನಿಮಾ 'ಸೈಯಾರಾ'. ಅನೀತ್ ಪಡ್ಡಾ ನಾಯಕಿ. ಮೆಲೋಡ್ರಾಮಾವನ್ನೇ ಇನ್ನಷ್ಟು ನೋವಿನಲ್ಲಿ ಅದ್ದಿ ತೋರಿಸುವುದಕ್ಕೇ ಹೆಸರಾಗಿರುವ ಮೋಹಿತ್ ಸೂರಿ ನಿರ್ದೇಶಕ. ಯಶ್ ರಾಜ್ ಫಿಲ್ಮ್ಸ್ ನಿರ್ಮಾಣ ಸಂಸ್ಥೆಯು ಜಾಣತನದಿಂದ ಈ ಸಿನಿಮಾ ನಿರ್ಮಿಸಿದೆ. ಚಿತ್ರದ ಬಜೆಟ್ ₹40 ಕೋಟಿ ಮೀರಿಲ್ಲ. ಆದರೆ, ಗಳಿಕೆ ಅದಾಗಲೇ ₹150 ಕೋಟಿ ದಾಟಿದೆ ಎಂದು 'ಸೈಕ್‌ನಿಲ್ಕ್' ವೆಬ್‌ಸೈಟ್ ವರದಿ ಮಾಡಿದೆ. ಸಿನಿಮಾಗಳ ಗಳಿಕೆ ಎಷ್ಟೆಂದು ವಹಿವಾಟು ಜಾಲದ ಮೂಲವನ್ನು ಆಧರಿಸಿ ಈ ವೆಬ್‌ಸೈಟ್ ಮಾಹಿತಿ ನೀಡುತ್ತದೆ.

2004ರಲ್ಲಿ ತೆರೆಕಂಡಿದ್ದ ಕೊರಿಯನ್ ಸಿನಿಮಾ 'ಎ ಮೊಮೆಂಟ್ ಟು ರಿಮೆಂಬರ್'ನ ಕಥೆಯ ಎಳೆಯನ್ನೇ ಎತ್ತಿಕೊಂಡು ಮೋಹಿತ್ ಸೂರಿ ಈ ಚಿತ್ರವನ್ನು ನಿರ್ದೇಶಿಸಿದ್ದಾರೆ. ಸಂಗೀತಗಾರ ಹಾಗೂ ಸಾಹಿತಿಯ ನಡುವಿನ ನವಿರಾದ ಪ್ರೇಮವು ಭಾವುಕ ತಿರುವನ್ನು ತೆಗೆದುಕೊಳ್ಳುವುದು ಚಿತ್ರದ ಹೂರಣ. ಮಿಥುನ್, ಸಚೇತ್–ಪರಂಪರ ಸಿನಿಮಾದ ಪ್ರಮುಖ ಹಾಡುಗಳಿಗೆ ಸಂಗೀತ ಸಂಯೋಜನೆ ಮಾಡಿದ್ದು, ಅವುಗಳು ಪ್ರೇಕ್ಷಕರಿಗೆ ರುಚಿಸಿವೆ.

ಯುವ ಪ್ರೇಕ್ಷಕರು ಭಾವುಕರಾಗಿ ಅಳುವ ದೃಶ್ಯಗಳನ್ನು ಸಾಮಾಜಿಕ ಮಾಧ್ಯಮದಲ್ಲಿ ಹರಿಬಿಡುತ್ತಿರುವುದು ಪ್ರಚಾರ ತಂತ್ರ ಎನ್ನುವುದರಲ್ಲಿ ಅನುಮಾನವಿಲ್ಲ. ಅದೂ ದೊಡ್ಡ ಗೆಲುವನ್ನು ತಂದಿತ್ತಿರುವುದಂತೂ ಸತ್ಯ. ■

# ಅಮೀರ್–ಲೋಕೇಶ್ ಭಾರಿ ಕನಸು

ಆರು ವರ್ಷಗಳ ಹಿಂದೆ ಲೋಕೇಶ್ ಕನಕರಾಜ್ 'ಖೈದಿ' ತಮಿಳು ಸಿನಿಮಾ ನಿರ್ದೇಶಿಸಿದಾಗ ಇಡೀ ದೇಶದ ಚಿತ್ರರಂಗ ಅದನ್ನು ಬೆರಗುಗಣ್ಣಿನಿಂದ ನೋಡಿತ್ತು. ಕೋವಿಡ್ ವ್ಯಾಪಕವಾದ ಸಂದರ್ಭದಲ್ಲಂತೂ ಅದನ್ನು ಜನರು ಪುಟ್ಟ ಮೊಬೈಲ್ ಪರದೆಗಳ ಮೇಲೂ ನೋಡಿ ರೋಮಾಂಚಿತರಾದರು. ಪೆರೋಲ್ ಮೇಲೆ ಬಿಡುಗಡೆಯಾಗಲು ಹೊರಟ ಕೈದಿಯೊಬ್ಬನ ರಾತ್ರಿ ಪಯಣದ ರೋಚಕ ಕಥನವನ್ನು ಆ ಚಿತ್ರ ಒಳಗೊಂಡಿತ್ತು. ಸಣ್ಣಪುಟ್ಟ ವಿವರಗಳಲ್ಲೇ ತಮ್ಮದೇ ಆದ 'ಸಿನಿಮಾ ಯೂನಿವರ್ಸ್' ಸೃಷ್ಟಿಸಿರುವುದಾಗಿಯೂ ಲೋಕೇಶ್ ಹೇಳಿಕೊಂಡಿದ್ದಾರೆ.



ಲೋಕೇಶ್ ಕನಕರಾಜ್

'ಖೈದಿ', 'ವಿಕ್ರಮ್' ಹಾಗೂ 'ಲಿಯೊ' ತಮಿಳು ಚಿತ್ರಗಳನ್ನು 'ಲೋಕೇಶ್ ಕನಕರಾಜ್ ಯೂನಿವರ್ಸ್' (ಎಲ್‌ಕೆಯು) ಸಿನಿಮಾಗಳೆಂದೇ ಗುರ್ತಿಸುತ್ತಾರೆ. ಆ ಮೂರೂ ಚಿತ್ರಗಳ ಕಥನದಲ್ಲಿ ಸಣ್ಣ ತಂತುವೊಂದು ಸಾಮಾನ್ಯ ಎಂಬಂತೆ ಇದೆ ಎನ್ನುವ ಲೋಕೇಶ್ ಮೇಲೆ ಈಗ 'ಮಿಸ್ಟರ್ ಪರ್ಫೆಕ್ಟ್' ಅಮೀರ್ ಖಾನ್ ಕಣ್ಣು ಬಿದ್ದಿದೆ. ಅಂದರೆ, ಅವರು ದೊಡ್ಡ ಸಿನಿಮಾ ಕನಸೊಂದನ್ನು ಸಾಕಾರಗೊಳಿಸಲು ಈ ನಿರ್ದೇಶಕರನ್ನು ಒಪ್ಪಿಸಿದ್ದಾರೆ.

ಲೋಕೇಶ್ ನಿರ್ದೇಶಿಸಿದ 'ಮಾಸ್ಟರ್', 'ವಿಕ್ರಮ್' ಹಾಗೂ 'ಲಿಯೊ' ಚಿತ್ರಗಳು ದೊಡ್ಡ ಮೊತ್ತವನ್ನು ಲಾಭವಾಗಿ ತಂದುಕೊಟ್ಟವು. ಒಂದು ಅಂದಾಜಿನ ಪ್ರಕಾರ 'ಲಿಯೊ' ಚಿತ್ರವೊಂದೇ ₹600 ಕೋಟಿಗೂ ಹೆಚ್ಚು ಗಳಿಸಿದೆ. ಅವರ ಸಿನಿಮಾಗಳನ್ನು ಹಿಂಸಾವಿನೋದ ಎಂದು ಟೀಕಿಸುವವರೂ ಇದ್ದಾರೆನ್ನಿ. ಆದರೆ, ಅಂತಹ ಶೈಲಿಯು ತಮ್ಮತನದ್ದು ಎಂದು ಲೋಕೇಶ್ ಸಮರ್ಥಿಸಿಕೊಳ್ಳುತ್ತಾರೆ. ಹಿಂಸೆಯನ್ನು ಅಗತ್ಯ ಸಂದರ್ಭಗಳಲ್ಲಿ ದೃಶ್ಯವತ್ತಾಗಿ ತಗ್ಗಿಸಿ ತೋರಿಸಿರುವುದಾಗಿಯೂ ಅವರು ಉದಾಹರಣೆಗಳನ್ನು ನೀಡುತ್ತಾರೆ. ಹಾಂಗ್‌ಕಾಂಗ್ ನಿರ್ದೇಶಕ ಜಾನ್ ವೂ ಅವರಿಂದ ತಾವು ಪ್ರೇರಿತರಾಗಿರುವುದಾಗಿ ಹೇಳಿಕೊಳ್ಳುವ ಲೋಕೇಶ್, ಹಿಂಸಾವಿನೋದವನ್ನು ಕೂಡ ನಿಯಂತ್ರಿತ ರೀತಿಯಲ್ಲಿ ಹೇಳಲು ಸಾಧ್ಯವಿದೆ ಎಂದೇ ವಾದಿಸುತ್ತಾರೆ.

ಸದ್ಯಕ್ಕೆ 'ಕೂಲಿ' ತಮಿಳು ಚಿತ್ರವನ್ನು ಅವರು ಬಿಡುಗಡೆಗೆ ಸಜ್ಜುಗೊಳಿಸಿದ್ದಾರೆ. ರಜನೀಕಾಂತ್ ನಾಯಕರಾಗಿರುವ ಈ ಚಿತ್ರದಲ್ಲಿ ಅಮೀರ್ ಖಾನ್ ಪ್ರಮುಖ ಪಾತ್ರವೊಂದರಲ್ಲಿ ಅಭಿನಯಿಸಿದ್ದಾರೆ. ಮುಂದೆ ಅವರೊಟ್ಟಿಗೆ ದೊಡ್ಡ ಸಿನಿಮಾ ಯೋಜನೆಯ ಕನಸು ಕಾಣುತ್ತಿರುವುದರ ಫಲವಿದು ಎಂದೇ ಕೆಲವರು ವಿಶ್ಲೇಷಿಸುತ್ತಿದ್ದಾರೆ.



ಅಮೀರ್ ಖಾನ್

'ಕೈದಿ 2' ಚಿತ್ರವನ್ನು ಮುಂದೆ ಲೋಕೇಶ್ ನಿರ್ದೇಶಿಸಲಿದ್ದು, ಅದರ ನಂತರ ಅಮೀರ್ ಖಾನ್ ಪ್ರಮುಖ ಪಾತ್ರದ ಸಿನಿಮಾ ಸೆಟ್ಟೇರುವ ಸಾಧ್ಯತೆ ಇದೆ.

'ಭಾರತಕ್ಕಷ್ಟೇ ಸೀಮಿತವಾಗದಂತಹ ವಸ್ತುವಿಷಯದ ಸಿನಿಮಾ ಅದು. ನಾವು ತುಂಬಾ ದೊಡ್ಡದಾಗಿ ಯೋಚಿಸಿ, ಅದನ್ನು ಚಿತ್ರೀಕರಿಸಲು ನಿರ್ಧರಿಸಿದ್ದೇವೆ. ವಿಶ್ವದ ಪ್ರೇಕ್ಷಕರು ಅದನ್ನು ತುಂಬು ಹೃದಯದಿಂದ ಸ್ವೀಕರಿಸುತ್ತಾರೆ ಎಂಬ ನಂಬಿಕೆ ಇದೆ' ಎಂದು ಲೋಕೇಶ್ ಹೇಳಿದ್ದಾರೆ. ಚಿತ್ರಕಥೆಯ ಎಳೆ ಏನು ಎನ್ನುವ ಗುಟ್ಟನ್ನು ಅವರು ಬಿಟ್ಟುಕೊಟ್ಟಿಲ್ಲ.

ಕಡಿಮೆ ಬಜೆಟ್‌ನಲ್ಲಿ 'ಸಿತಾರೆ ಜಮೀನ್ ಪರ್' ಸಿನಿಮಾ ಮಾಡಿಸಿ, ಅದರಲ್ಲಿ ದೊಡ್ಡ ಲಾಭ ಕಂಡಿರುವ ಅಮೀರ್ ಖಾನ್ ಕೂಡ ಕಾಲಕ್ಕೆ ತಕ್ಕಂತೆ ಬದಲಾಗುವ ತಂತ್ರವನ್ನು ಒಪ್ಪಿಕೊಂಡಿದ್ದಾರೆನ್ನುವುದು ಅವರ ನಿರ್ಧಾರದಿಂದ ಸ್ಪಷ್ಟವಾಗುತ್ತದೆ. ■